ಬರೆದಿದ್ದಾರೆ. ಆಸ್ಪತ್ರೆಯಲ್ಲಿದ್ದಾಗ ಈ ವಿಷಯನ್ನು ಮಾತನಾಡಲೆಂದೇ ನನ್ನನ್ನು ಕರೆಸಿದ್ದರು. ಈ ಕಾರಣಕ್ಕಾಗಿಯೇ ಆ ಸಂದರ್ಭದಲ್ಲಿ ನಾನು ನಿಮ್ಮನ್ನು ಭೇಟಿಮಾಡಿದ್ದು."

ನನ್ನಿಂದ ಮಾತು ಹೊರಡಲಿಲ್ಲ. ಆದರೂ ಸಾವರಿಸಿಕೊಂಡು ಹೇಳಿದೆ, "ನೋಡಿ ಸಗಾಯ್ ಅವರೆ... ನಾನು ಧರಣೇಂದ್ರಯ್ಯನವರ ಹಣ ಅಥವಾ ಆಸ್ತಿಯ ಮೇಲಿನ ವ್ಯಾಮೋಹದಿಂದ ಅವರಿಗೆ ಆತಿಥ್ಯ ನೀಡಿರಲಿಲ್ಲ. ಅವರು ನಮ್ಮ ದೂರದ ಸಂಬಂಧಿ ಎಂದರು. ಅದೂ ಅಲ್ಲದೇ ಅವರು ವಯೋವೃದ್ಧರಾಗಿದ್ದರು. ನನ್ನಿಂದ ಸಹಾಯ ಅಪೇಕ್ಷಿಸಿ ಬಂದಿದ್ದರು. ನನ್ನ ಕೈಲಾದ ಸಹಾಯ ಮಾಡಿದೆ ಅಷ್ಟೆ."

ನನ್ನ ಮಾತು ಮುಗಿಯುವ ಮುಂಚೆಯೇ ಆ ವ್ಯಕ್ತಿ ನುಡಿದ: "ಅದಕ್ಕೆ ಸ್ವಾಮೀ ನೀವು ಧರಣೇಂದ್ರಯ್ಯನವರಿಂದ ಏನನ್ನೂ ಅಪೇಕ್ಷಿಸದೆ ಮಾಡಿದ ಸಹಾಯಕ್ಕಾಗಿಯೇ ಅದೃಷ್ಟ ಲಕ್ಷ್ಮಿ ನಿಮ್ಮನ್ನು ಹುಡುಕಿಕೊಂಡು ಬಂದಿರೋದು. ನೀವು ಆ ಹಣವನ್ನು ತೆಗೆದುಕೊಂಡರೆ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ."

ನಾನು ಮುಂದೆ ಮಾತನಾಡಲಿಲ್ಲ. ದೂರವಾಣಿ ಸಂಪರ್ಕ ಕಡಿಯಿತು. ಮುಂದೇನು ಮಾಡಬೇಕೆಂಬ ಗೊಂದಲದಿಂದ ನಿಧಾನವಾಗಿ ಮನೆಯೊಳಗೆ ನಡೆದೆ. ಅಮ್ಮ ಮತ್ತು ಜ್ಯೋತಿ ಅಪರಾಧಿ ಮನೋಭಾವದಿಂದ ತಲೆತಗ್ಗಿಸಿಕೊಂಡು ಕುಳಿತಿದ್ದರು.

"ರೀ... ನಾವು ತುಂಬಾ ತಪ್ಪು ಮಾಡಿಬಿಟ್ವಿ. ಧರಣೇಂದ್ರಯ್ಯನವರನ್ನು ಅರ್ಥಮಾಡಿಕೊಳ್ಳದೆ ತುಂಬಾ ಒರಟಾಗಿ ನಡೆದುಕೊಂಡ್ವಿ" ಜ್ಯೋತಿ ಕಣ್ಣಿನಲ್ಲಿ ನೀರು ತುಂಬಿಕೊಂಡು ನುಡಿದಳು.

"ಹೋಗಲಿ ಬಿಡು ಈಗ ಪಶ್ಚಾತಾಪ ಪಟ್ರೆ ಏನು ಪ್ರಯೋಜನ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಅಂತ ಪ್ರಾರ್ಥನೆ ಮಾಡಿ ಸಾಕು."

ಕುರ್ಚಿಗೆ ಒರಗಿಕೊಂಡು ತಲೆ ಹಿಂದಕ್ಕೆ ಆನಿಸಿ ಮೆಲ್ಲಗೆ ಕಣ್ಣು ಮುಚ್ಚಿಕೊಂಡೆ. ಅನಾಮಿಕನಂತೆ ಬಂದು ಆಪದ್ಬಾಂದವನಾಗಿ ಮರೆಯಾದ ಧರಣೇಂದ್ರಯ್ಯನವರ ಜೀವನದ ಘಟನೆಗಳು ಕಣ್ಣ ಮುಂದೆ ಸುಳಿದಾಡತೊಡಗಿದವು.

## ಮ.ಸೊ. ಹಾಲಸ್ವಾಮಿ

ಭದ್ರಾವತಿ ತಾಲ್ಲೂಕಿನವರಾದ ಲೇಖಕರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಔಷಧ ತಯಾರಿಕಾ ಘಟಕಗಳಿಗೆ ತಾಂತ್ರಿಕ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.

ಸುಮಾರು 30ಕ್ಕೂ ಹೆಚ್ಚು ಹಾಸ್ಯಕಥೆಗಳು, 20ಕ್ಕೂ ಹೆಚ್ಚು ಕಥೆಗಳು, 100ಕ್ಕೂ ಹೆಚ್ಚು ವ್ಯಂಗ್ಯಚಿತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ರಂಗಭೂಮಿಯಲ್ಲೂ ತೊಡಗಿಸಿಕೊಂಡಿದ್ದು, 'ಕಲಾಸಂಪದ' ಎಂಬ ಹವ್ಯಾಸಿ ರಂಗತಂಡದಲ್ಲಿ ಸಕ್ರಿಯರಾಗಿದ್ದಾರೆ. 'ಮಯೂರ'ದಲ್ಲಿ ಪ್ರಕಟವಾಗಿದ್ದ 'ಸುಂದ್ರವ್ವನ ಬ್ಯೂಟಿ ಪಾರ್ಲರ್' ಎಂಬ ಹಾಸ್ಯ ಕಥೆ ನಾಟಕವಾಗಿ ರೂಪಾಂತರಗೊಂಡು ಹಲವು ಪ್ರದರ್ಶನಗಳನ್ನು ಕಂಡಿದೆ. 'ಫಜೀತಿ ಪ್ರಕರಣಗಳು', 'ಅವರ ಬಿಟ್ಟು ಇವರ ಬಿಟ್ಟು ಅವರ್‍ಯಾರು', 'ವನಮಾಲ' ಎಂಬ ನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ.